

ಈ ಟಿಪ್ಪಣಿಗಳ ಆರಂಭದ ಪುಟವೊಂದರ ಮೇಲ್ಭಾಗದಲ್ಲೊಂದು ವಾಕ್ಯವಿದೆ: 'ಸಾಹಿತ್ಯ ಒಂದು ಸಾಮಾಜಿಕ ಸಂಸ್ಥೆ ಎಂಬುದು ಗಮನಾರ್ಹ; ಸಮಾಜದಲ್ಲಿನ ಮತ್ತು ಸಾಹಿತ್ಯದ ಹಿಂದಿನ ಆಲೋಚನಾ ಕ್ರಮ ಒಂದೇ ಆಗಿದೆ.' ಅದೇ ಪುಟದಲ್ಲಿ 'ಎಸ್.ಎಲ್. ಭೈರಪ್ಪ ಒಬ್ಬ ಜನಪ್ರಿಯ ಕಾದಂಬರಿಕಾರ' ಎನ್ನುವ ಡಿ.ಆರ್. ಜನಪ್ರಿಯ ಸಾಹಿತ್ಯ ಕುರಿತು ಮಾಡುವ ವಿಶ್ಲೇಷಣೆ: '1. ಒಬ್ಬ ಲೇಖಕ ತೀರ ಸುಲಭವಾಗಿ ಜನಪ್ರಿಯನಾದ ಎಂದರೆ ಆತ ಹೊಸ ರುಚಿಗಳನ್ನು ಸೃಷ್ಟಿಸುತ್ತಿದ್ದಾನೆ ಎನ್ನುವುದಕ್ಕಿಂತ ಒಗ್ಗಿರುವ ರುಚಿಗೇ ಬರೆಯುತ್ತಿದ್ದಾನೆ. 2. ಹೀಗೆ ಜನಪ್ರಿಯವಾಗುವ ಕೃತಿಗಳು ಆ ಜನಾಂಗದ ಮೇಲ್ಪದರದ ಅಭಿರುಚಿಯನ್ನು, ಆಲೋಚನಾ ಕ್ರಮವನ್ನು ಬಿಂಬಿಸುತ್ತವೆ; ಇವು ಸರಳ ಮತ್ತು ಮಾದಕವಾಗಿರುತ್ತವೆ.'

ಈ ಗ್ರಹಿಕೆಗಳ ಅನಂತರ ಮಾವೋತ್ಸೆ ತುಂಗ್ ಮಾತಿನ ಉಲ್ಲೇಖವಿದೆ: 'ಸಾಹಿತ್ಯ ಕೃತಿಗಳು ಸರಳವಾದ, ಚಪ್ಪಟೆ ಕೃತಿಗಳಾಗಿದ್ದರೆ ಇವತ್ತಿನ ಜನಸಮೂಹ ಅಂಥವನ್ನು ಬಹುಬೇಗ